ಚರ್ಚಿಸಿದ ಈ ಕೃತಿ, ಪ್ರತಿಭೆಯಂತಹ ಮೂಲಭೂತ ಪರಿಕಲ್ಪನೆಯನ್ನು ಸಾಂಸ್ಕೃತಿಕವಾಗಿ ಭಿನ್ನವಾದ ಎರಡು ಪರಂಪರೆಗಳು ಗ್ರಹಿಸಿದ ಪರಿಯನ್ನು, ಎರಡೂ ಪರಂಪರೆಗೂ ವಿಶಿಷ್ಟವಾದ ಕೆಲವು ಸಂಗತಿಗಳನ್ನು ಆಕರ್ಷಕವಾಗಿ ಮಂಡಿಸುತ್ತಲೇ, ಅಪ್ಪಟ ಕಾವ್ಯವು ಇಂಥ ಚೌಕಟ್ಟುಗಳ ಒಳಗಿದ್ದೂ ಅದನ್ನು ಅನಾಯಾಸವಾಗಿ ಲಂಘಿಸುವ ಮಾಂತ್ರಿಕತೆಯನ್ನೂ ಹೇಳುತ್ತಾರೆ. ಕಾವ್ಯಾರ್ಥದ ಚಿಂತನೆಯು ನಿರಂತರ ಪ್ರಯಾಣ ಎನ್ನುವ ಸತ್ಯದ ದರ್ಶನವನ್ನು ಈ ಕೃತಿ ನೀಡುತ್ತದೆ.

ಕನ್ನಡ ಮೀಮಾಂಸೆಯನ್ನು ಕುರಿತ ಇವರ ಆಲೋಚನೆಗಳು 'ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ'ಯ ಕೊನೆಯ ಸಂಪುಟದಲ್ಲಿ ಇವರು ಬರೆದ 'ಕನ್ನಡ ಸಾಹಿತ್ಯ ಇಟ್ಟ ಹೆಜ್ಜೆ ತೊಟ್ಟ ರೂಪ' ದೀರ್ಘ ಲೇಖನದಲ್ಲಿ ಸ್ಪಷ್ಟವಾಗಿವೆ. ಹಲವು ಪ್ರಭಾವಗಳಿಗೆ ಒಳಗಾಗಿಯೂ ಕನ್ನಡ ಸಾಹಿತ್ಯ ತನ್ನತನದ ಪನ್ನತಿಕೆಯನ್ನು ಗಳಿಸಿಕೊಳ್ಳಲು ನಡೆಸಿದ ಪ್ರಯತ್ನಗಳು ನಿಧಾನವಾಗಿ ಅವರಿಗೆ ತುಂಬಾ ಮುಖ್ಯವಾಗಿ ಕಂಡವು. ಭಾರತವು ಸಾಂಸ್ಕೃತಿಕವಾಗಿ ವಿಸ್ಮೃತಿಗೊಳಗಾದ, ದಮನಿತ ಮೂಲಭಾರತವನ್ನು ಹುಡುಕ ಹೊರಟ ಐತಿಹಾಸಿಕ ಸಂದರ್ಭದಲ್ಲಿಯೇ ಜಿಎಸ್ಎಸ್ ಕನ್ನಡ ಕಾವ್ಯಮೀಮಾಂಸೆಯ ಪ್ರಯತ್ನಗಳನ್ನು ಆರಂಭಿಸಿದರು.

**ಈ ಪವಿತ್ರ ಭಾರತದಲ್ಲಿ ಹಿಂದುಗಳಿದ್ದಾರೆ,**
**ಮುಸ್ಲಿಮರಿದ್ದಾರೆ, ಕ್ರೈಸ್ತರಿದ್ದಾರೆ,**
**ಬ್ರಾಹ್ಮಣರಿದ್ದಾರೆ, ಲಿಂಗಾಯಿತರಿದ್ದಾರೆ,**
**ಒಕ್ಕಲಿಗರಿದ್ದಾರೆ...**
**... ಆದರೆ ನಾನು ಹುಡುಕುತ್ತಿರುವುದು ಮನುಷ್ಯರನ್ನು**
**ದಯಮಾಡಿ ಹೇಳಿ ಅವರೆಲ್ಲಿದ್ದಾರೆ?**

ಎನ್ನುವ ಜಿಎಸ್ಎಸ್, ಈ ಹುಡುಕಾಟದಲ್ಲಿ ಹೆಣ್ಣನ್ನು ಮರೆಯಲಿಲ್ಲ. ಎಲ್ಲೆಲ್ಲೂ ಹಾಡುವ 'ಸ್ತ್ರೀ ಅಂದರೆ ಅಷ್ಟೇ ಸಾಕೆ' ಎನ್ನುವ ಕವಿತೆ ಹಾಗೆ ನೋಡಿದರೆ, ಸ್ಥಾಪಿತ ಹೆಣ್ಣನ್ನೇ ಎತ್ತಿ ಹಿಡಿಯುತ್ತದೆ. ಅವರ ಸ್ತ್ರೀಪರ ದೃಷ್ಟಿಯ ಕೆಲವು ಕವಿತೆಗಳು ಮತ್ತು ಲೇಖನಗಳು ಮಹಿಳಾಸಂಕಥನದ ಭಾಗಗಳೇ ಆಗಿವೆ. 'ದಾಟಿ ಬಾ ನಿರ್ಭಯದ ನಿಲುವಿಗೆ' ಎನ್ನುವ ಕವಿತೆಯಲ್ಲಿ ಹೆಣ್ಣಿನ ನಿಜವಾದ ಸವಾಲುಗಳನ್ನು ಕರಾರುವಾಕ್ಕಾಗಿ, ಮುಕ್ತವಾಗಿ ಹೇಳುತ್ತಾರೆ. ಜಗತ್ತಿನ ಎಲ್ಲ ಧರ್ಮಗಳೂ ಹೆಣ್ಣನ್ನು ಮೌಲ್ಯಗಳ ಚಾಟಿ ಬೀಸುತ್ತಲೇ ಅವಳನ್ನು ಜೀವಂತವಾಗಿ ಕೊಲ್ಲುತ್ತಿರುವುದನ್ನು ಹೇಳಿ, ಧರ್ಮದ, ಗಂಡಾಳಿಕೆಯ ಮುಳ್ಳುಬೇಲಿಗಳನ್ನು ನಿರ್ಭಯವಾಗಿ ದಾಟುವುದೊಂದೇ ದಾರಿ ಉಳಿದಿರುವುದು ಹೆಣ್ಣಿಗೆ ಎನ್ನುತ್ತಾರೆ. ಮುಖ್ಯವಾದ ಮಾತೆಂದರೆ, 'ನಿರ್ಭಯದ ನಿಲುವಿಗೆ ಹೆಣ್ಣು ತಾನೇ ಚಲಿಸಬೇಕು, ಯಾರೂ ಬರುವುದಿಲ್ಲ ಅವಳ ಜೊತೆಗೆ' ಎನ್ನುವ ಸತ್ಯವನ್ನೂ ಕಾಣಿಸುತ್ತಾರೆ.



ಇದರ ಪ್ರಾಯೋಗಿಕ ರೂಪಕವೋ ಎನ್ನುವಂತೆ ಅಕ್ಕಮಹಾದೇವಿ ಇದನ್ನು ಸಾಧಿಸಿದ್ದನ್ನು ಜಿಎಸ್ಎಸ್ ಅಪಾರ ಸಂಭ್ರಮದಲ್ಲಿ ಚಿತ್ರಿಸುತ್ತಾರೆ.

**ಕಿಚ್ಚಿಲ್ಲದುರಿಯಲ್ಲಿ ಬೆಂದದ್ದು ಸಾಕು**
**ನಿನ್ನ ಬಿಡುಗಡೆಯ ಬಯಸುವೆ ನಾ**
**ಬೆಳಗು ಬೆಳಗೊಳು ಬೆರೆದು ಬೆಳಕ ಮೈನಡೆದಂತೆ**
**...ಅಗೋ ಶ್ರೀಶೈಲ ಜೂಟದಲಿ ಚಂದ್ರಬಿಂಬ**

ಅಕ್ಕನ ಬಗೆಗೆ ಜಿಎಸ್ಎಸ್ ಬರೆದ ಮಹತ್ವದ ಲೇಖನ, 'ಅಕ್ಕಮಹಾದೇವಿ: ವಚನ ಚಳವಳಿಯಲ್ಲೊಂದು ಭಿನ್ನಸ್ವರ' ಬರಹವು ಅಕ್ಕನನ್ನು ಅವಳ ಸ್ವಾಯತ್ತ ನೆಲೆಯಲ್ಲಿ ಗುರುತಿಸಿದ ಐತಿಹಾಸಿಕ ಪ್ರಯತ್ನ. ಆ ತನಕ ಅವಳನ್ನು ವಚನ ಚಳವಳಿಯ ಫಲಾನುಭವಿಯಾಗಿಯೇ ಗುರುತಿಸಲಾಗುತ್ತಿತ್ತು. ಮೊದಲ ಬಾರಿಗೆ ಜಿಎಸ್ಎಸ್ ಅವಳ ಸ್ವತಂತ್ರ ಮನೋವೃತ್ತಿಯ ನಿರಂಕುಶ ವ್ಯಕ್ತಿತ್ವವನ್ನು ಸರಿಯಾಗಿ ಸ್ಥಾಪಿಸುವ ಪ್ರಯತ್ನ ಮಾಡಿದರು.

**ಪ್ರೀತಿ ಇಲ್ಲದ ಮೇಲೆ ಹೂವು ಅರಳೀತು ಹೇಗೆ?**
**ಪ್ರೀತಿ ಇಲ್ಲದ ಮೇಲೆ ಪದಕ್ಕೆ ಪದ ಪಕ್ಕಕ್ಕಿಟ್ಟ ಮಾತ್ರಕ್ಕೆ**
**ಕಾವ್ಯವಾದೀತು ಹೇಗೆ?**

ಜಿ.ಎಸ್. ಶಿವರುದ್ರಪ್ಪನವರು ಪ್ರೀತಿಯ ಹೂವನ್ನೂ ಅರಳಿಸಿದವರು, ಕಾವ್ಯವನ್ನೂ ಅರಳಿಸಿದವರು. ಪ್ರೀತಿ ಮತ್ತು ಕಾವ್ಯ ಎರಡನ್ನೂ ನೆಚ್ಚಿದ ಈ ಕವಿ ಕನ್ನಡದ ಶಾಶ್ವತ ಕವಿ.

●